# ಗೂಗಲ್ ಪೀಪಲ್ ಕಾರ್ಡ್ಸ್‌!

■ ಶಶಿಕುಮಾರ ಸಿ.

ಜೀವನದಲ್ಲಿ ಒಮ್ಮೆಯಾದರೂ ಟೀವಿಯಲ್ಲಿ ಹೆಸರು–ಫೋಟೊ ಕಾಣಿಸಿಕೊಳ್ಳಬೇಕು ಎಂದು ಆಸೆಪಡುವವರು ಇರುವಂತೆಯೇ, ಗೂಗಲ್ ಸರ್ಚ್‌ನಲ್ಲಿ ತಮ್ಮ ಹೆಸರು ಇರಬೇಕೆಂದು ಕನಸು ಕಾಣುವ ಜನರೂ ಇದ್ದಾರೆ. ಅಂಥವರ ಆಸೆ ಈಡೇರಿಸಲು ಗೂಗಲ್ ‘ಪೀಪಲ್ಸ್ ಕಾರ್ಡ್’ ಅನ್ನು ಈಚೆಗೆ ಲಾಂಚ್ ಮಾಡಿದೆ.

ಸಾಮಾನ್ಯವಾಗಿ ಗೂಗಲ್‌ನಲ್ಲಿ ಬಳಕೆದಾರರ ಹೆಸರು ಮತ್ತು ಅವರ ಸ್ವವಿವರ ಕಾಣಬೇಕು ಎಂದರೆ ಯಾವುದಾದರೂ ಸಾಧನೆ ಮಾಡಿರಬೇಕು. ಯಾವುದೇ ಸಾಧನೆ ಮಾಡದಿದ್ದರೂ ಹೆಸರನ್ನು ಗೂಗಲ್ ಸರ್ಚ್ ಎಂಜಿನ್‌ನಲ್ಲಿ ಕಾಣಲು ‘ಪೀಪಲ್ಸ್ ಕಾರ್ಡ್’ ಅನುವು ಮಾಡಿಕೊಡುತ್ತದೆ.

ಹೌದು, ಗೂಗಲ್ ಪೀಪಲ್ ಕಾರ್ಡ್ ಎಂಬುದು ವರ್ಚುವಲ್ ವಿಸಿಟಿಂಗ್ ಕಾರ್ಡ್ ಆಗಿದೆ. ಆನ್‌ಲೈನ್‌ನಲ್ಲಿ ತಮ್ಮ ಹೆಸರನ್ನು ಸುಲಭವಾಗಿ ಸರ್ಚ್ ಮಾಡಲು ಬಳಕೆದಾರರಿಗೆ ಸಹಾಯ ಮಾಡುತ್ತದೆ. ಆನ್‌ಲೈನ್‌ನಲ್ಲಿ ಹೆಚ್ಚು ಸುಲಭವಾಗಿ ಸರ್ಚ್ ಮಾಡಲು ಬಯಸುವ ಜನರಿಗೆ, ಕನಿಷ್ಠ ಗೂಗಲ್ ಸರ್ಚ್‌ನಲ್ಲಿಯಾದರೂ ತಮ್ಮ ಹೆಸರು ಕಾಣಿಸಿಕೊಳ್ಳಲು ಇದು ಅವಕಾಶ ಮಾಡಿಕೊಡಲಿದೆ. ಇದರಿಂದ ಯಾವುದೇ ಬಳಕೆದಾರರು ಒಂದು ನಿರ್ದಿಷ್ಟ ಹೆಸರನ್ನು ಸರ್ಚ್ ಮಾಡಿದರೆ ಆ ಹೆಸರು ಅತ್ಯಂತ ವೇಗವಾಗಿ ಪಾಪ್ ಅಪ್ ಆಗಲು ಈ ಕಾರ್ಡ್ ಸಹಾಯ ಮಾಡುತ್ತದೆ.

ಗೂಗಲ್ ಬಳಕೆದಾರರು ಸರ್ಚಿಂಗ್‌ನಲ್ಲಿ ವರ್ಚುವಲ್ ವಿಸಿಟಿಂಗ್ ಕಾರ್ಡ್ ಅನ್ನು ಸೃಷ್ಟಿಸಬಹುದು. ಈ ಕಾರ್ಡ್‌ನ ಜೊತೆಗೆ ಕಾರ್ಡ್ ಸೃಷ್ಟಿದಾರರ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳ ಪ್ರೊಫೈಲ್, ವಿಳಾಸ, ಸ್ಟೇಟಸ್ ಇತ್ಯಾದಿ ಮಾಹಿತಿಯನ್ನು ಲಿಂಕ್ ಮಾಡಬಹುದು. ಹಾಗೇ ಲಿಂಕ್ ಮಾಡಿದ ಮಾಹಿತಿಯು ಗೂಗಲ್ ಸರ್ಚ್‌ನಲ್ಲಿ ಹೈಲೈಟ್ ಆಗಲಿದೆ. ಬಳಕೆದಾರರು



ಬಯಸಿದರೆ ಫೋನ್ ಸಂಖ್ಯೆ ಮತ್ತು ಇಮೇಲ್ ವಿಳಾಸವನ್ನು ಸಹ ಹೈಲೈಟ್ ಮಾಡಬಹುದು.

ಇತರರು ನಿಮ್ಮ ಬಗ್ಗೆ ತಿಳಿದುಕೊಳ್ಳಬೇಕೆಂದು ನೀವು ಬಯಸುವ ಯಾವುದಾದರೂ ಮಾಹಿತಿಯನ್ನು ಹೈಲೈಟ್ ಮಾಡಬಹುದು. ಅಷ್ಟೇ ಅಲ್ಲ, ಗೂಗಲ್ ಪಿಪಲ್ಸ್ ಕಾರ್ಡ್ ಅನ್ನೇ ವಿಸಿಟಿಂಗ್ ಕಾರ್ಡ್ ರೂಪದಲ್ಲೂ ಬಳಸಬಹುದು. ನಿಮ್ಮ ಬಗ್ಗೆ ತಿಳಿಯಲು ಇಚ್ಛಿಸುವ ಯಾವುದೇ ವ್ಯಕ್ತಿಯಾದರೂ ನಿಮ್ಮ ಹೆಸರನ್ನು ಗೂಗಲ್‌ನಲ್ಲಿ ಸರ್ಚ್ ಮಾಡಿದರೆ ನಿಮ್ಮ ಮಾಹಿತಿ ಆತ ತಿಳಿಯಬಹುದು.

ಪ್ರಸ್ತುತ ಈ ಫೀಚರ್ಸ್ ಸ್ಮಾರ್ಟ್‌ಫೋನ್‌ಗಳ ಗೂಗಲ್ ಸರ್ಚ್‌ನಲ್ಲಿ ಮಾತ್ರ ಲಭ್ಯವಿದೆ. ಸದ್ಯದ ಮಟ್ಟಿಗೆ ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿದ್ದು, ಮುಂದಿನ ದಿನಗಳಲ್ಲಿ ದೇಶದ ಪ್ರಮುಖ ಭಾಷೆಗಳಲ್ಲಿ ಹೊರತರಲಾಗುವುದು ಎಂದು ಗೂಗಲ್ ಹೇಳಿದೆ.

## ಕಾರ್ಡ್ ಕ್ರಿಯೇಟ್ ಹೇಗೆ?

- ಪೀಪಲ್ ಕಾರ್ಡ್ ರಚಿಸುವುದು ತುಂಬಾ ಸರಳ. ನಿಮ್ಮ ಗೂಗಲ್ ಖಾತೆಗೆ ಸೈನ್ ಇನ್ ಆಗಬೇಕು.
- ನಂತರ ನೀವು ಗೂಗಲ್ ಸರ್ಚ್‌ನಲ್ಲಿ ನಿಮ್ಮ ಹೆಸರನ್ನು ಸರ್ಚ್ ಮಾಡುವುದಕ್ಕಾಗಿ ಅಥವಾ ಪೀಪಲ್ಸ್ ಕಾರ್ಡ್ ಕ್ರಿಯೇಟ್ ಮಾಡಲು ಆ್ಯಡ್ ಮಿ ಟು ಸರ್ಚ್ (Add me to Search) ಅಂತ ಟೈಪ್ ಮಾಡಿ.
- ಗೂಗಲ್ ಸರ್ಚ್‌ನಲ್ಲಿ ಪಡೆಯುವ ಮೊದಲ ಪ್ರಾಂಪ್ಟ್‌ನಲ್ಲಿ add yourself ಮತ್ತು ಅಲ್ಲಿಂದ ನಿಮ್ಮ ಕಾರ್ಡ್ ಕ್ರಿಯೆಟ್ ಮಾಡಿ.
- ನಿಮ್ಮ ಇಮೇಜ್ ಆ್ಯಡ್ ಮಾಡಿ. ಸ್ವವಿವರ ಸೇರಿಸಿ. ನಿಮ್ಮ ವೆಬ್‌ಸೈಟ್‌ಗಳು ಮತ್ತು ಸಾಮಾಜಿಕ ಪ್ರೊಫೈಲ್‌ಗಳಿಗೆ ಲಿಂಕ್‌ಗಳನ್ನು ಸೇರಿಸಿ, ಫೋನ್ ಸಂಖ್ಯೆ ಮತ್ತು ಇಮೇಲ್ ಐಡಿ ಅನ್ನು ಸೇರಿಸಿ. ಇದೀಗ ನಿಮ್ಮ ಕಾರ್ಡ್ ಕ್ರಿಯೆಟ್ ಆಗಲಿದೆ.

## ಸಾಮಾನ್ಯ ಹೆಸರಿದ್ದರೆ?

ಕೋಟ್ಯಂತರ ಮಂದಿಯುಳ್ಳ ದೇಶದಲ್ಲಿ ಒಂದೇ ರೀತಿಯ ಹೆಸರುಳ್ಳ ಹಲವರು ನಮ್ಮ ನಡುವೆಯೇ ಇದ್ದಾರೆ. ಒಂದೇ ಹೆಸರಿನ ಇಬ್ಬರು ಕಾರ್ಡ್ ಅನ್ನು ಕ್ರಿಯೇಟ್ ಮಾಡಿದಾಗ ಅದು ಆ ವ್ಯಕ್ತಿಗಳ ವೃತ್ತಿ ಮತ್ತು ಸ್ಥಳದ ಮಾಹಿತಿಯ ಆಧಾರದ ಮೇಲೆ ಕಾಣಿಸಿಕೊಳ್ಳುತ್ತದೆ. ಸರಿಯಾದ ವ್ಯಕ್ತಿಯನ್ನು ಹುಡುಕಿರುವುದು ಖಾತರಿಯಾದರೆ ‘ರೈಟ್ ಕಾರ್ಡ್’ ಆಯ್ಕೆಯನ್ನು ಕ್ಲಿಕ್ಕಿಸಬಹುದು. ಮುಂದಿನ ಬಾರಿಯ ಹುಡುಕಾಟಕ್ಕೆ ಇದು ನೆರವಾಗಲಿದೆ. ಕಾರ್ಡ್‌ನ ಜೊತೆಗೆ ನಿಮ್ಮ ಫೋಟೊವನ್ನು ಅಪ್‌ಲೋಡ್ ಮಾಡಿಲ್ಲದಿದ್ದರೂ ವೃತ್ತಿ, ಸ್ಥಳ ಹಾಗೂ ಇತ್ಯಾದಿ ಮಾಹಿತಿಯು ನಿಮ್ಮ ಕಾರ್ಡ್ ಅನ್ನು ಗುರುತಿಸಲು ಸಹಾಯ ಮಾಡುತ್ತದೆ.

## ಕಾರ್ಡ್‌ಗಳ ಸುರಕ್ಷತೆ ಹೇಗೆ?

ಬಳಕೆದಾರರ ಹಿತದೃಷ್ಟಿಯಿಂದ ಕಾರ್ಡ್‌ಗಳಲ್ಲಿ ಸರಿಯಾದ ಮತ್ತು ವಿಶ್ವಾಸಾರ್ಹ ಮಾಹಿತಿಯಿದೆ ಎಂದು ಖಚಿತಪಡಿಸಿಕೊಳ್ಳಲು ಮತ್ತು ಬಳಕೆದಾರರನ್ನು ನಿಂದನೀಯ ಮತ್ತು ಆಕ್ರಮಣಕಾರಿ ವಿಷಯದಿಂದ ರಕ್ಷಿಸಲು ಗೂಗಲ್ ಕಂಟ್ರೋಲ್ಸ್ ಮತ್ತು ಪ್ರೊಟೆಕ್ಷನ್ ಗುಂಪನ್ನು ಸಹ ಹೊಂದಿದೆ. ಅದಕ್ಕಾಗಿ ಬಳಕೆದಾರರಿಗೆ ಕೇವಲ ಒಂದು ಪೀಪಲ್ ಕಾರ್ಡ್ ಮಾತ್ರ ಕ್ರಿಯೇಟ್ ಮಾಡಲು ಅವಕಾವಿದೆ. ಗೂಗಲ್ ಖಾತೆ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ದೃಢೀಕರಿಸಿದರೆ ಮಾತ್ರ ಕಾರ್ಡ್ ಆಕ್ಟೀವ್ ಆಗಲಿದೆ. ಬಳಕೆದಾರರು ತಮ್ಮ ಕಾರ್ಡ್‌ಗಳಲ್ಲಿನ ಮಾಹಿತಿಯ ಸಂಪೂರ್ಣ ನಿಯಂತ್ರಣವನ್ನು ಹೊಂದಿರುತ್ತಾರೆ. ■

